# ನಾಯಕಿಯ ಕಾಮಿಡಿಯೇ ಇಲ್ಲಿನ ಸೊಗಸು



## ಮಾನಸಿ

ಸ್ಟಾರ್ ಸುವರ್ಣದ 'ಜೈ ಲಲಿತಾ' ನಾಯಕಿ

■ ರಾಘವೇಂದ್ರ ಕೆ.

◆ **ನಟಿ ಆಗದಿದ್ದರೆ, ಏನು ಮಾಡಬೇಕು ಎನ್ನುವ ಕನಸು ಇತ್ತು?**

ನಟನೆಗೆ ಆಕಸ್ಮಿಕ ಪ್ರವೇಶ ಆಯಿತು. ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಮಾಡಬೇಕು ಎನ್ನುವುದು ಕನಸಾಗಿತ್ತು. 10ನೇ ತರಗತಿಯಲ್ಲಿ ಓದುವಾಗಲೇ ಈ ಪಯಣ ಆರಂಭವಾಯಿತು. 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಮೊದಲ ಸಿನಿಮಾ. ಮುಂದೊಂದು ದಿನ ನಾಯಕಿಯಾಗಿ ಬೆಳೆಯಬಹುದು ಎಂಬ ಕಲ್ಪನೆಯೂ ಇರಲಿಲ್ಲ. ಅದೃಷ್ಟವಶಾತ್ ಅವಕಾಶ ನನ್ನ ಹುಡುಕಿ ಬಂದಿದೆ ಎಂದು ಭಾವಿಸಿದ್ದೇನೆ. ಅಭಿನಯಿಸುವ ವಿಷಯದಲ್ಲಿ ತುಂಬ ಖುಷಿ ಇದೆ. ಈ ವೃತ್ತಿ ಇಷ್ಟವೂ ಆಗಿದೆ. ಈಗ ಇದನ್ನೇ ಮುಂದುವರಿಸಬೇಕು ಎಂದು ನಿರ್ಧರಿಸಿದ್ದೇನೆ. ಮೊದಲ ಸಿನಿಮಾ ಮುಗಿದ ಮೇಲೆ ಉದಯದ 'ನಾತಿಚರಾಮಿ' ಧಾರಾವಾಹಿಯಲ್ಲಿ ನಟಿಸಿದೆ. ಈಗ ಲಲಿತಾ ಪಾತ್ರ ಸಿಕ್ಕಿದೆ. ಸದ್ಯ ಎರಡು ಸಿನಿಮಾಗಳಲ್ಲಿ ಮಾಡುತ್ತಿದ್ದೇನೆ.

◆ **ರಾಜಕೀಯಕ್ಕೆ ಏನಾದರೂ ಲಿಂಕ್ ಆಗುತ್ತಾ?**

ಇಲ್ಲ. ಟೈಟಲ್ ನೋಡಿದ ತಕ್ಷಣ ಹಾಗೆ ಅನ್ನಿಸಬಹುದು. ಇದಕ್ಕೆ ಭಿನ್ನ ಆಯಾಮವೇ ಇದೆ. ಇದರ ಹೆಸರು ಕೂಡ ವಿಶೇಷವಾಗಿದೆ. ಕಥೆಯ ನಾಯಕ ಜೈ, ನಾಯಕಿ ಲಲಿತಾ. ಅವರಿಬ್ಬರ ಹೆಸರನ್ನು ಸೇರಿಸಿ ಧಾರಾವಾಹಿಯ ಟೈಟಲ್ ರೂಪಿಸಿದ್ದಾರೆ. ನಾಯಕಿ ಪಾತ್ರ ಆಗಾಗ ಲಲಿತಾಗೆ ಜಯವಾಗಲಿ, ಜೈ ಲಲಿತಾ ಎಂದು ಘೋಷಣೆ ಹಾಕುವುದರಿಂದ ಅದೇ ನಾಮಕರಣ ಮಾಡಿದ್ದಾರೆ ಎಂದುಕೊಂಡಿದ್ದೇನೆ. ಸದ್ಯ ತ್ರಿಕೋನ ಪ್ರೀತಿ ಪ್ರಣಯ ಇಲ್ಲಿಲ್ಲ. ಪ್ರೀತಿ ಒಂದು ಅಂಶ ಆದರೂ ಅದೇ ಪ್ರಧಾನ ಅಲ್ಲ. ಇಲ್ಲಿ ರಾಜಕೀಯ ನಾಟಕ ಬರುತ್ತದೆ. ವರ್ಗ ಭೇದ ನೀತಿಯೂ ಬಡವ–ಬಲ್ಲಿದರ ನಡುವಿನ ತಾರತಮ್ಯವನ್ನು ಅನಾವರಣ ಮಾಡುತ್ತದೆ. ಕಾಮಿಡಿ ಕೂಡ ಹೆಚ್ಚಾಗಿದೆ. ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಕುಳಿತು ನೋಡಬಹುದು ಎನ್ನುವ ಭಾವನೆ ಇದೆ. ಯುವಕರಿಗೂ ಇಷ್ಟ ಆಗುವಂತೆ ನಿರೂಪಣೆ ಆಗಿದೆ. ಪುರುಷರು ಮೆಚ್ಚುವ ರಾಜಕೀಯ ಅಂಶವೂ ಬರುತ್ತದೆ. ಲಲಿತಾ ಒಳ್ಳೆಯ ಕಾಮಿಡಿ ಟಚ್ ಕೊಡುತ್ತಾಳೆ.

◆ **ಬಣ್ಣದ ಲೋಕದಲ್ಲಿನ ಮರೆಯದ ನೆನಪುಗಳನ್ನು ಹೇಳಬಹುದಾ?**

ಪ್ರತಿ ಸಂದರ್ಭವೂ ಸಿಹಿಯಾದ ನೆನಪುಗಳಾಗಿಯೇ ನನ್ನಲ್ಲಿವೆ. ಇಂಡಸ್ಟ್ರಿಯಲ್ಲಿ ಒಳ್ಳೆಯ ತಂಡದ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಸಂದರ್ಭದಲ್ಲಿ ನಟನೆ ಅಂದರೆ ಏನು ಎಂಬ ತತ್ವವೇ ಗೊತ್ತಿರಲಿಲ್ಲ. ಕಲಾವಿದರು ಹೇಗಿರುತ್ತಾರೆ, ಅವರು ಹೇಗೆ ನಟನೆ ಮಾಡುತ್ತಾರೆ ಎನ್ನುವ ಸಂಗತಿಯನ್ನೂ ಬಣ್ಣ ಹಚ್ಚಿದ ಮೇಲೆ ಅರ್ಥಮಾಡಿಕೊಂಡೆ. ಹಳ್ಳಿಯಿಂದ ಬಂದಿದ್ದ ನನಗೆ ಎಲ್ಲ ಹೊಸತಾಗಿತ್ತು. ನಿರ್ದೇಶಕ ಅರುಣ್ ಅಭಿನಯವನ್ನು ಕಲಿಸಿದ ಗುರುಗಳು. ಅವರೇ ಹೇಗೆ ಇರಬೇಕು ಎನ್ನುವುದನ್ನು ಹೇಳಿಕೊಟ್ಟು ಬೆಳೆಸಿದರು. ಅಭಿನಯ ಕಲಿಯದ ನನಗೆ ಸಿನಿಮಾರಂಗದ ಹಿನ್ನೆಲೆಯೂ ಇರಲಿಲ್ಲ. ರಂಗಭೂಮಿಯ ಪರಿಚಯವೂ ಇರಲಿಲ್ಲ. ತರಬೇತಿಯನ್ನು ಪಡೆಯದಿದ್ದರೂ ಅಭ್ಯಾಸದಿಂದ ಬೆಳೆಸಿಕೊಂಡಿದ್ದೇನೆ. ಒಳ್ಳೆಯ ನಟಿ ಆಗಬೇಕು ಎಂಬುವುದು ನನ್ನ ಆಸೆ. ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದೇನೆ.

◆ **ನಿಮ್ಮ ಊರು ಈಗ ಹೇಗೆನಿಸುತ್ತದೆ?**

ಹುಟ್ಟಿದ್ದು ಬೆಂಗಳೂರು. ಬೆಳೆದದ್ದು ಮಾತ್ರ ಕುಣಿಗಲ್. ಅಜ್ಜಿ–ತಾತನ ಮನೆಯಲ್ಲೇ ಬೆಳೆದೆ. ನನ್ನ ಮಾತಿನ ಧಾಟಿ ಹಳ್ಳಿಯ ಸೊಗಡಿನಿಂದ ಕೂಡಿತ್ತು. ಅಜ್ಜಿ–ತಾತ ನಟನೆಯ ಬಗ್ಗೆ ಮೊದಲು ಆಕ್ಷೇಪ ವ್ಯಕ್ತಪಡಿಸಿದ್ದರು. ಅಮ್ಮ–ಅಪ್ಪ ಪ್ರೋತ್ಸಾಹ ನೀಡಿದ್ದರು. ಸರಳವಾದ ಹುಡುಗಿ, ವೃತ್ತಿಯಿಂದ ಜೀವನ ಶೈಲಿಯೂ ಬದಲಾವಣೆಯಾಯಿತು. ಹಳ್ಳಿಯಲ್ಲಿಯೂ ಜನ ಗುರುತಿಸಿ ಪ್ರೀತಿ ತೋರಿಸುತ್ತಾರೆ. ಅದೆಲ್ಲ ಅಜ್ಜ–ಅಜ್ಜಿಗೆ ಹೆಮ್ಮೆಯನ್ನು ಮೂಡಿಸಿದೆ. ತಂದೆ ಥಾಮಸ್ ಬೆಂಗಳೂರಿನಲ್ಲಿ ಸ್ವಂತ ಉದ್ಯಮವನ್ನು ನಡೆಸುತ್ತಿದ್ದಾರೆ. ತಾಯಿ ರೂಪಾ ಗೃಹಿಣಿ. ■